ಶ್ರೀ ಜೆ. ಎಲ್. ಕಬಾಡೆ.—ಇಂಡಿ ತಾಲ್ಲೂಕಿನ ಹೆಚ್ಚಿನ ವೃದ್ಧಾಪ್ಯ ವೇತನದ ಪ್ರಕರಣಗಳು ಇವೆ ಎಂಬುದು ತಮ್ಮ ಜನರಿಗೆ ಬಂದದ್ದು ಯಾವಾಗ ?

ಶ್ರೀ ಎಂ. ವೈ. ಘೋರ್ಪಡೆ.—6ನೇ ಅಕ್ಟೋಬರ್ 1975 ರಲ್ಲಿ ಹೊರಡಿಸಿದು ಒಂದು ಸರ್ಕಾರಿ ಆಜ್ಞೆ ಇದೆ ಆದರ ಪ್ರಕಾರ ಅಲ್ಲೂ ಕೂಡ ಉಪ-ಖಜಾನೆಯಲ್ಲಿ ಕೆಲಸ ಮಾಡತಕ್ಕಂಥ ಎರಡನೆಯ ದರ್ಜೆಯ ಗುಮಾಸ್ತರಿಗೆ 15 ರೂಪಾಯಿ ವಿಶೇಷ ವೇತನವನ್ನು ಕೊಟ್ಟಿದ್ದೇವೆ.

ಶ್ರೀ ಜೆ. ಎಲ್. ಕಬಾಡೆ.—ಈಗ ಸಾಧಾರಣವಾಗಿ ಉಪ-ಖಜಾನೆಯಲ್ಲಿರತಕ್ಕಂಥ ಕೆಲಸಕ್ಕೂ ಮತ್ತು ಆದರ ಜೊತೆಗೆ ಇದೊಂದು ಹೆಚ್ಚಿನ ಹೊರೆ ಬಿದ್ದರುವುದರಿಂದ ಅವರ ಕೆಲಸಕ್ಕೆ ಆತಂಕವಾಗಿ ಕೆಲವು ಕಡೆ ಪೇಮೆಂಟ್ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ವೈ. ಘೋರ್ಪಡೆ.—ನಾವು ಯಾವ ಒಂದು ಉದ್ದೇಶದಿಂದ ವ್ಯವಸ್ಥೆ ಮಾಡಿದ್ದೇವೆ ಎನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು. ಕರ್ನಾಟಕದಲ್ಲಿ 92 ಸಾವಿರ ಜನಕ್ಕೆ ಒಲ್ಡ್ ಏಜ್ ಪೆನ್‌ಷನ್ ಕೊಡುತ್ತಿದ್ದೇವೆ. ಈಗ ನಡೆಯುತ್ತಿರತಕ್ಕಂಥ ವ್ಯವಸ್ಥೆ ಸರಿಯಾಗಿದೆಯೆಂದು ಭಾವನೆ ಮಾಡುತ್ತೇನೆ.

Complaints against Sheristedar Sedam.

†4. SRI J. P. SARWESH (Sedam).—Will the Minister for Revenue be pleased to state.—

(*a*) whether complaints have been received by the Government against Sri Shivarudrappa, Sheristedar, Assistant Commissioner's Office, Sedam of Gulbarga District.

(*b*) if so, whether any enquiry is conducted into the allegations made against him.

(*c*) if so, the action taken against him ?

SRI N. HUTCHAMASTHY GOWDA (Minister for Revenue).—

(*a*) Yes.

(*b*) Yes.

(*c*) No action has been taken against him since the charges levelled against him have been held to be not proved.

SRI. J. P. SARWESH.—May I know the names of persons who have made complaint against this Officer ?

† SRI. N. HUTCHAMASTHY GOWDA.—The names of persons who have given complaint against this Officer are as follows :—

1. Sri J. P. Sarwesh, M.L.A.
2. Sri Rudrappa Patil President, Block Congress Committee, Sedam.
3. Sri Mallikarjuna Reddy,

4. Sri Shivaraj Patil,
5. Sri Vijaya Rao,
6. Sri R. T. Rama Reddy,
7. Sri Mallait, Chairman, V.P.
8. Sri Nagappa,

SRI J. P. SARWESH.—Whether the Government is aware that the Enquiry Officer has not called any of those persons ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನನ್ನ ಮುಂದಿರತಕ್ಕಂಥ ಕಾಗದ ಪತ್ರಗಳ ಪ್ರಕಾರ, ಅಸಿಸ್ಟೆಂಟ್ ಕಮಿಷನರ್‌ರವರು ಕೆಲವು ಊರುಗಳಿಗೆ ಹೋಗಿ ವಿಚಾರಣೆ ಮಾಡಿದ್ದಾರೆ. ವಿಚಾರಣೆ ಮಾಡುವಾಗ ಯಾರು ದೂರು ಕೊಟ್ಟಿದ್ದರೋ ಅವರೇ ಒಂದೆರಡು ಸಂದರ್ಭಗಳಲ್ಲಿ ನಾನು ದೂರು ಕೊಟ್ಟಿಲ್ಲವೆಂದು ಹೇಳಿ ಬಿಟ್ಟಿದ್ದಾರೆ ಹಾಗೆಯೇ ಅದು ಇನ್ನೂ ರುಜುವಾತು ಆಗಿಲ್ಲ ಎನ್ನುವುದಕ್ಕೆ ಸಾಕಷ್ಟು ಆಧಾರಗಳು ಸಿಕ್ಕಿಲ್ಲವೆಂದು ಅಸಿಸ್ಟೆಂಟ್ ಕಮಿಷನರ್‌ರವರ ವರದಿಯಿಂದ ಗೊತ್ತಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾರು ಇವತ್ತಿನ ದಿವಸ ದೂರು ಕೊಟ್ಟಿದ್ದರೋ ಅವರನ್ನು ಕರೆಸಿ ವಿಚಾರಣೆ ನಡೆಸಿದ್ದಾರೆಯೇ ? ಆ ರೀತಿ ವಿಚಾರಣೆ ನಡೆಸಿದ್ದರೆ ವಿಚಾರಣೆ ಯಾದ ಮೇಲೆ ಯಾರು ತಪ್ಪಿತಸ್ಥರು ಯಾರು ತಪ್ಪಿತಸ್ಥರಲ್ಲವೆಂದು ತೀರ್ಮಾನ ತೆಗೆದುಕೊಂಡಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅವರು ಯಾರು ಯಾರನ್ನು ಕರೆದಿದ್ದರು ಎನ್ನುವ ಬಗ್ಗೆ ವಿವರ ಇಲ್ಲ. ದೂರು ಕೊಟ್ಟಿರುವವರ ಪೈಕಿ ರಾಮ ರೆಡ್ಡಿಯವರು ಒಬ್ಬರು. ಅವರನ್ನು ಕರೆಸಿ ಕೇಳಿದಾಗ ಅವರು ನಾನು ದೂರು ಕೊಟ್ಟಿಲ್ಲವೆಂದು ಹೇಳಿದ್ದಾರೆಂದು ನನ್ನ ಮುಂದಿರುವ ವರದಿಯಲ್ಲಿದೆ. ಮತ್ತೆ ಉಳಿದವರನ್ನು ಕರೆಸಿದ್ದರೋ ಇಲ್ಲವೋ ಏನ್ನುವ ವಿವರ ನನ್ನಲ್ಲಿ ಇಲ್ಲ.

SRI J. P. SARWESH.—Will the Hon Minister be pleased to issue special instruction to the same Assistant Commissioner to conduct a fresh enquiry in this case ?

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಅವರು ವಿಚಾರಣೆ ಮಾಡಿರುವುದರಲ್ಲಿ ದೋಷವಿದೆ ಯೆಂದು ಕಂಡು ಬಂದರೆ, ಅವರೇ ವಿಚಾರಣೆ ಮಾಡಬೇಕೆಂದು ಏನೂ ಇಲ್ಲ. ಈಗ ನಡೆಸಿರ ತಕ್ಕಂಥ ವಿಚಾರಣೆ ಸರಿಯಾಗಿಲ್ಲ ಬೇರೆಯವರನ್ನು ಕಳುಹಿಸಿ ವಿಚಾರಣೆ ನಡೆಸಬೇಕೆಂದು ಹೇಳಿದರೆ ಬೇರೆಯವರೊಬ್ಬರಿಂದ ವಿಚಾರಣೆ ನಡೆಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಉತ್ತರ ಕೊಡುತ್ತಾ ಒಬ್ಬರಿಗೆ ಮಾತ್ರ ಕರೆಸಿರುವ ವಿಷಯ ತಿಳಿಸಿದಿರಿ, ಮಿಕ್ಕವರನ್ನು ಕರೆಸಿರುವ ವಿಷಯ ಗೊತ್ತಿಲ್ಲ ಎಂದು ಹೇಳಿದಿರಿ, ಅದು ಒಂದೇ ಸಾಕು ಇದರಲ್ಲಿ ದೋಷ ನಡೆದಿದೆ ಎಂದು ಹೇಳುವುದಕ್ಕೆ. ಅದುದರಿಂದ ತಾವು ಎಲ್ಲರನ್ನೂ ಕರೆಸಿ ವಿಚಾರಣೆ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ವಿಚಾರಣೆ ಮಾಡಿರುವುದರಲ್ಲಿ ದೋಷ ಕಂಡುಬಂದರೆ ಅದನ್ನು ಮತ್ತೆ ವಿಚಾರಣೆ ಮಾಡಿಸುವುದಕ್ಕೆ ಅಡ್ಡಿ ಇಲ್ಲ. ಈಗ ನನ್ನಲ್ಲಿ ಇರತಕ್ಕ ವರದಿ ಪ್ರಕಾರ ಹೇಳುವುದಾದರೆ ಉದಾಹರಣೆಗೆ ಒಂದು ಜಮೀನನ್ನು ಅಕ್ವೈರ್ ಮಾಡುವಾಗ ಅದರ ಕಾಂಪನ್ ಸೇಷನ್ ಎಷ್ಟು ಕೊಡಬೇಕು ಎನ್ನುವುದರಲ್ಲಿ ಒಂದು ದೂರಿನಲ್ಲಿ ಹೆಚ್ಚಿಗೆ ಕೊಟ್ಟಿದ್ದಾರೆ ಎಂದು ಇದೆ, ಈಗ ಕೊಟ್ಟಿರುವುದರಲ್ಲಿ ನೋಡಿದರೆ 16,698 ರೂಪಾಯಿ ಎಂದು ಇದೆ, ಇಷ್ಟು ಹಣವನ್ನು ಕೊಡಬೇಕು ಎಂದು ಮಾಡಲು ಕಳಿಸಿರುವುದು. ಆದರೆ ನಂತರ ಡೆಪ್ಯೂಟಿ ಕಮಿಷನರ್ ವಿಚಾರಣೆ ಮಾಡಿ ನೋಡಿದ್ದಲ್ಲಿ 16,698 ರೂಪಾಯಿ ಕೊಡಬೇಕಾದ್ದು ಇಲ್ಲ, ಸೇಲ್ಸ್ ಸ್ಯಾಟಿಸ್ಟಿಕ್ಸ್ ತೆಗೆದು ಕೊಂಡು ನೋಡಿ 7096 ರೂಪಾಯಿ ಕೊಟ್ಟರೆ ಸಾಕು ಎಂದು ಅಷ್ಟು ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದ ನಿರ್ದಿಷ್ಟವಾಗಿ ರುಜುವಾತು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಆದರ ವರದಿ ಯಾಗಿದೆ. ಆದುದರಿಂದ ನಾನು ಮೊದಲೇ ಹೇಳಿದ ಹಾಗೆ ಮತ್ತೆ ಇದನ್ನು ಪರಿಶೀಲನೆ ಮಾಡುವುದಕ್ಕೆ ಅಡ್ಡಿ ಇಲ್ಲ ಎಂದು ಹೇಳುತ್ತೇನೆ.